5. ಪ್ರಶ್ನೋತ್ತರ (ಮುಂದುವರೆದುದು)

ಶ್ರೀ ಕೃಷ್ಣ ಭೈರೇಗೌಡ : ಸರ್ವೇಯರ್ಸ್‌ದ್ದು ಉತ್ತರ ಕೊಡಿಸಿ ಸಾರ್.

ಶ್ರೀಮತಿ ಸೀಮಾ ಅಶೋಕ ಮಸೂತಿ : ಈಗಾಗಲೇ ಸರ್ಕಾರದ ಮಟ್ಟದಲ್ಲಿ 34 ಜನರ ಸರ್ವೇಯರ್ಸ್ ನೇಮಕಾತಿ ಪ್ರಕ್ರಿಯೆ ನಡೆದಿದೆ, ಅವರು ಈಗಾಗಲೇ ತರಬೇತಿಯಲ್ಲಿದ್ದಾರೆಂದರು. ಇದಕ್ಕಾಗಿ ನಾನು ಅವರಿಗೆ ನಮ್ಮೆಲ್ಲರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ, ಇನ್ನೊಂದು ಸಮಸ್ಯೆ ಏನೆಂದರೆ, ಸರ್ಕಾರದ ಮಟ್ಟದಲ್ಲಿ ಈಗಾಗಲೇ ಹಳ್ಳಿಗಳಲ್ಲಿ ನಮ್ಮ ರೈತರ ಅಫ್ಸಾತ್ ಹೊಲದ ರಸ್ತೆಗಳಿವೆ. ಹೊಲದ ರಸ್ತೆಗಳಿಗೆ ಈಗಾಗಲೇ ಇರುವಂಥ ಸರ್ವೇಯರ್ಸ್ ಕೊರತೆಯಿಂದ ದಿನಂಪ್ರತಿ ನಮ್ಮ ರೈತರು ಜಗಳ ತಂದು ಪೋಲೀಸ್ ಸ್ಟೇಷನ್‌ಗೆ ಹೋಗುವಂಥದ್ದು, ಅದನ್ನು ನಾವೇ ಹೋಗಿ ಬಗೆಹರಿಸಿದರೂ ಆ ಸಮಸ್ಯೆ ಬಗೆಹರಿಯುತ್ತಿಲ್ಲ. ಅಂಥ ಸಮಸ್ಯೆಗಳಿವೆ. ಅದಕ್ಕೆ ನಾನು ಸರ್ಕಾರಕ್ಕೆ ಎಲ್ಲರ ಪರವಾಗಿ ವಿನಂತಿ ಮಾಡುತ್ತಿದ್ದೇನೆ. ಯಾವ ಅಫ್ಸಾತ್ ಹೊಲದ ರಸ್ತೆಗಳು ನಮ್ಮ ರೈತರದ್ದು ಇವೆ ಅವುಗಳನ್ನು ಸರ್ವೆಯನ್ನು ಮಾಡಿ ನಿಮ್ಮ ಹೊಲದ ರಸ್ತೆ ಇಷ್ಟು ಇದೆ ಎಂದು ಅಳೆದು ಕೊಟ್ಟರೆ ರೈತ ರೈತರ ಮಧ್ಯೆ ಜಗಳವಾಡುವುದನ್ನು ನಾವು ನಿಲ್ಲಿಸಬಹುದು ಎನ್ನುವುದನ್ನು ಮಾನ್ಯ ಸಭಾಧ್ಯಕ್ಷರ ಮುಖೇನ ನಮ್ಮ ಮುಖ್ಯಮಂತ್ರಿಗಳಿಗೆ ವಿಶೇಷವಾದಂಥ ವಿನಂತಿಯನ್ನು ಎಲ್ಲರ ಪರವಾಗಿ ಮಾಡಿಕೊಳ್ಳುತ್ತೇನೆ.

ಶ್ರೀ ಟಿ.ಎಸ್.ಸುರೇಶ್ : ತಾತ್ಕಾಲಿಕ ಪರಿಹಾರ ಏನು ಎಂಬುದನ್ನು ನಮಗೆ ಹೇಳಲಿಲ್ಲ. ಡೆಪ್ಯೂಟೇಷನ್ ಹೋದವರನ್ನು ವಾಪಸ್ ಕರೆಸಿ ಎಂದು ಹೇಳಿದೆವು. ದಯಮಾಡಿ ಮಾನ್ಯ ಮಂತ್ರಿಗಳು ಇದರ ಕಡೆಗೆ ಗಮನ ಕೊಡಬೇಕು. ಇಲ್ಲಾಂದ್ರೆ ಬಹಳ ತೊಂದರೆಯಾಗುತ್ತದೆ ಏಕೆಂದರೆ ಆ ಊರು ಹೈವೇನಲ್ಲಿವೆ.

ಶ್ರೀ ಟಿ.ಎನ್.ರುದ್ರೇಶ್ ಗೌಡ : ತಾಲ್ಲೂಕು ಆಫೀಸ್‌ನಲ್ಲಿ ಒಬ್ಬ ಅಥವಾ ಇಬ್ಬರು ಸರ್ವೇಯರ್ಸ್ ಇರುತ್ತಾರೆ, ಇದು ಸಾಲದು. ಪ್ರತಿ

ತಾಲ್ಲೂಕು ಆಫೀಸ್‌ನಲ್ಲಿ ಕನಿಷ್ಠವೆಂದರೂ 4–5 ಸರ್ವೇಯರ್ ಬೇಕು. ನೀವು ಒಬ್ಬ ಸರ್ವೇಯರ್ ಇಡೀ ತಾಲ್ಲೂಕು ನೋಡಿಕೊಳ್ಳಿ ಎಂದರೆ ತಾಲ್ಲೂಕು ಆಫೀಸ್‌ನಲ್ಲಿ ಸಾಕಾಗುತ್ತದೆಯೆ? ಯಾವ ಕಾರಣಕ್ಕೂ ಆಗುವುದಿಲ್ಲ. ಆದುದರಿಂದ, ಪ್ರತಿ ತಾಲ್ಲೂಕು ಆಫೀಸ್‌ನಲ್ಲಿಯೂ 4–5 ಸರ್ವೇಯರ್ಸ್ ಬೇಕೇ ಬೇಕು. ಪ್ರತಿ ತಾಲ್ಲೂಕಿನಲ್ಲಿ ಎಷ್ಟೆಷ್ಟು ರೈತರು ಅಪ್ಲಿಕೇಷನ್ ಫೈಲ್ ಮಾಡಿದ್ದಾರೆ ಎನ್ನುವ ಬಗ್ಗೆ ನೀವು ಬೇಕಾದರೆ ಡೀಟೇಲ್ ವರದಿ ತರಿಸಿಕೊಳ್ಳಿ. ತಾವು ಕ್ಲಾರಿಫೈ ಮಾಡಿ. ಪ್ರತಿ ತಾಲ್ಲೂಕಿಗೂ ಸಹ 4–5 ಜನ ಸರ್ವೇಯರ್ಸ್ ಬೇಕು. ನಾವು ತಹಸೀಲ್ದಾರ್‌ರವರಿಗೆ ಕೇಳಿದರೆ ಅವರು ಹೇಳುವುದು ಏನೆಂದರೆ, ರುದ್ರೇಶ್‌ಗೌಡ, ಇರುವವನೆ ಒಬ್ಬನೆ ಸರ್ವೇಯರ್ ಇರುವುದರಿಂದ ನಾವು ಯಾವ ಕಾರಣಕ್ಕೂ ಆಗುವುದಿಲ್ಲವೆಂದು ಹೇಳುತ್ತಾರೆ.

ಶ್ರೀ ಹೆಚ್.ಡಿ.ರೇವಣ್ಣ : ಸರ್ವೇಯರ್ಸ್ ಹುದ್ದೆಗಳು ಖಾಲಿಯಿದ್ದು ಕೆಲವು ಕಡೆ ಹದ್ದುಬಸ್ತು ಮಾಡುವುದು ಇರಬಹುದು, ಪಕ್ಕಾ ಪೋಡಿ ಮಾಡುವುದು ಇರಬಹುದು, ಅಥವಾ ಯಾರಾದರೂ ತಮ್ಮ ಜಮೀನನ್ನು ಮದುವೆ ಮುಂಜಿಗಾಗಿ ಮಾರಾಟ ಮಾಡಬೇಕೆಂದರೂ ಒಂದರಿಂದ ನಾಲ್ಕೈದು ವರ್ಷಗಳಾದರೂ ಆಗುತ್ತಿಲ್ಲ. ಇಡೀ ತಾಲ್ಲೂಕಿನ ಸೀನಿಯಾರಿಟಿಯನ್ನು ಹಾಕಿ ಬಿಡುತ್ತಾರೆ. ಏಕೆಂದರೆ ಯಾರಾದರೊಬ್ಬ ೫ ಗುಂಟೆ ಜಮೀನು ಮಾರಾಟ ಮಾಡಬೇಕೆಂದರೆ, ಪಕ್ಕಾ ಪೋಡಿ ಮಾಡಬೇಕಾಗುತ್ತದೆ, ಇದು ಮಾಡದಿದ್ದರೆ ಮಾರಾಟ ಮಾಡುವುದಕ್ಕಾಗುವುದಿಲ್ಲ. ದಯಮಾಡಿ ತಾವು ಅದನ್ನು ಗಮನಿಸಬೇಕು. ಹಿಂದೆ ಯಾವ ರೀತಿ ಇತ್ತು, ಬೇಕಾದರೆ ಸರ್ವೇಯರ್ ಆಮೇಲೆ ಮಾಡಿಸಿಕೊಳ್ಳಿ, ಪಕ್ಕಾ ಪೋಡಿ ಆಮೇಲೆ ಮಾಡಿಸಿಕೊಳ್ಳಿ. ಈಗ ಫ್ರೀಯಾಗಿ ಮಾಡದೇ ಹೋದರೆ ಏನಾಗುತ್ತದೆ ಎಂದರೆ, ಕೆಲವು ಕಡೆ 5–6 ವರ್ಷಗಳಾದರೂ ಅವನು ತನ್ನ ಜಮೀನು ಮಾರಾಟ ಮಾಡುವುದಕ್ಕೆ ಆಗುತ್ತಿಲ್ಲ. ಹದ್ದುಬಸ್ತು ಆಗುತ್ತಿಲ್ಲ, ಆದುದರಿಂದ, ಸರ್ವೇಯರ್‌ನ್ನು ನೇಮಕ ಮಾಡುವುದರ ಜೊತೆಗೆ ಅದೊಂದು ಸಡಿಲ ಮಾಡುವುದಕ್ಕೆ ಏನು ಮಾಡಬೇಕೋ ಮಾನ್ಯ ಕಂದಾಯ ಹಾಗೂ ಉಪ ಮುಖ್ಯಮಂತ್ರಿಗಳು ಆ ನಿಟ್ಟಿನಲ್ಲಿ ಯೋಚನೆ ಮಾಡಬೇಕು. ಇಲ್ಲದೇ ಹೋದರೆ ಬಡಬಗ್ಗರು ಅವರ ಮದುವೆ ಮುಂಜಿಗಾಗಿ

ತಮ್ಮ ಜಮೀನನ್ನು ಅರ್ಜೆಂಟ್ ಆಗಿ ಮಾರಾಟ ಮಾಡಬೇಕು ಎಂದರೆ, ತಾಲ್ಲೂಕು ಲೆವಲ್ ಸೀನಿಯಾರಿಟಿ ಆಗಬೇಕು ಎಂದರೆ ಕಷ್ಟವಾಗುತ್ತದೆ. ದಯಮಾಡಿ ಇದಕ್ಕೆ ಸ್ಪಷ್ಟವಾದ ಉತ್ತರ ಕೊಡಬೇಕೆಂದು ಬಯಸುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಈಗಾಗಲೇ ರಾಜ್ಯ ಸರ್ಕಾರ ಸರ್ವೇಯರನ್ನು ನೇಮಕ ಮಾಡುವ ನಿಟ್ಟಿನಲ್ಲಿ ನಾನು ಸ್ಪಷ್ಟವಾದ ಉತ್ತರ ಕೊಟ್ಟಿದ್ದೇನೆ. ಇದಲ್ಲದೆ, ರಾಜ್ಯದಲ್ಲಿ 2294 licensed surveyors ಇದ್ದಾರೆ. ಇವರು ಯಾವುದೋ ಕಾಲದಿಂದಲೂ ನಾವು ಅವರಿಗೆ 300/– ಫೀಸ್ ಮಾತ್ರ ಕೊಡುತ್ತಿದ್ದೇವು. ಅವರು ಒಬ್ಬ ಅಸಿಸ್ಟೆಂಟ್‌ನನ್ನು ಇಟ್ಟುಕೊಳ್ಳಬೇಕು. ಅವನಿಗೆ 250/– ರೂಪಾಯಿ ಕೊಡಬೇಕು, ಇವರಿಗೆ ಏನೂ ಉಳಿಯುವುದಿಲ್ಲವೆನ್ನುವ ಪ್ರಶ್ನೆ ಇತ್ತು. ಹೀಗಾಗಿ ಈ licensed surveyors ಗೆ ಈಗ ನಾವು 800/– ಪ್ರತಿ ಒಂದು ಸೈಟ್‌ಗೆ ಕೊಡಬೇಕು ಎನ್ನುವ ಯೋಚನೆಯನ್ನು ನಾವು ಮಾಡಿದ್ದೇವೆ. ಇದರ ಜೊತೆಗೆ ಉಳಿದಂಥ ವ್ಯಾಲ್ಯೂವೇಷನ್ ಬಗ್ಗೆ ಇರಬಹುದು, ದರಖಾಸ್ತು ಬಗ್ಗೆ ಇರಬಹುದು, land acquisition ಬಗ್ಗೆ ಇರಬಹುದು. ಇದೆಲ್ಲಕ್ಕೂ ಕೂಡ extra ಕೊಡಬೇಕೆನ್ನುವ ಯೋಚನೆ ಮಾಡುತ್ತಿದ್ದೇವೆ. ಇದಲ್ಲದೆ ಒಂದು ಸರ್ವೇಯರ್‌ಗೆ ಕೆಲವು ಕಡೆ ತಿಂಗಳಿಗೆ 4 ಸಿಗುತ್ತದೆ, ಕೆಲವು ಕಡೆ 10 ರಿಂದ 12 ಸಿಗುತ್ತದೆ, ಜಾಸ್ತಿ ಬೇಕೆಂದು ಅವರು ಅಪೇಕ್ಷೆ ಪಡುತ್ತಿದ್ದಾರೆ. ಕನಿಷ್ಠ ತಿಂಗಳಿಗೆ 20 ರಿಂದ 25 ಸ್ಕೆಚ್ ಕೊಡಬೇಕೆನ್ನುವ ಯೋಚನೆ ಕೂಡ ಮಾಡುತ್ತಿದ್ದೇವೆ. ಹೀಗೆ ಹೊಸ ಅಪಾಯಿಂಟ್ ಕೂಡ ಮಾಡುತ್ತಿದ್ದೇವೆ, licensed surveyorsಗೂ ಕೂಡ ಜಾಸ್ತಿ ಮಾಡಿ ಅವರನ್ನೂ ಕೂಡ ಈ ಸೇವೆಗೆ ಬಳಸಿಕೊಳ್ಳಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಮಾನ್ಯ ಎಲ್ಲಾ ಶಾಸಕರ ಕಳಕಳಿ ಸರ್ಕಾರಕ್ಕೆ ಅರ್ಥವಾಗಿದೆ. ಸುಮಾರು 26 ಲಕ್ಷ ಸರ್ವೇ ಆಗ ಬೇಕಾಗಿರುವ ಕೇಸ್‌ಗಳು ಬಾಕಿ ಇವೆ. ಹೀಗಾಗಿ ಇವೆನ್ನೆಲ್ಲಾ ಭರ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಹೊಸ ಸರ್ವೇಯರ್ಸ್‌ಗೆ ತೆಗೆದುಕೊಳ್ಳುತ್ತಿದ್ದೇವೆ. ಅವರನ್ನೂ ಬೇಗ ಅಪಾಯಿಂಟ್ ಮಾಡಿಕೊಳ್ಳುತ್ತೇವೆ. ಹಳಬರಿಗೂ ಕೂಡ ಜಾಸ್ತಿ ಹಣ ಕೊಟ್ಟು ಅವರಿಗೂ ಹೆಚ್ಚಿನ ಕೇಸ್ ಕೊಟ್ಟು ಬಳಸಿಕೊಳ್ಳುವಂಥ ಪ್ರಯತ್ನ ಮಾಡುತ್ತೇವೆ.

ಶ್ರೀ ವೀರಣ್ಣ ಸಿ.ಚರಂತಿ ಮಠ್ : ಪರ್ಮನೆಂಟ್ ಅಪಾಯಿಂಟ್-ಮೆಂಟ್ ಆಗುವವರೆಗಾದರೂ ನಿವೃತ್ತಿದಾರರನ್ನು ಬಳಸಕೊಳ್ಳಬಹುದಲ್ಲವೆ? ಅಲ್ಲಿಯವರೆಗೆ ನೀವೃತ್ತಿದಾರರನ್ನು ಬಳಸಿ-ಕೊಂಡರೆ ಅನುಕೂಲವಾಗುತ್ತದೆ. ಎಲ್ಲಾ ತಾಲ್ಲೂಕಿನಲ್ಲಿಯೂ ಈ ಸಮಸ್ಯೆಯಿದೆ.

ಅಧ್ಯಕ್ಷರು : ಆಯಿತು ಸಾಕು ಬಿಡಿ ನಾನು ಬೇರೆಯವರನ್ನು ಕರೆದಿದ್ದೇನೆ, ನೀವು ಕೇಳಿ.

ಕರ್ನಾಟಕ ಭೂಸುದಾರಣೆ ಕಾಯ್ದೆ 79, ಎ ಮತ್ತು ಬಿ ಅನ್ನು ರದ್ದುಪಡಿಸುವುದು

24 : (536)

ಶ್ರೀ ವಿಶ್ವನಾಥ್. ಎಸ್.ಆರ್

ಅ. ಕರ್ನಾಟಕ ಭೂ ಸುಧಾರಣೆ 1961ರ ನಿಯಮ 79–ಎ ಪ್ರಕಾರ ಕೃಷಿ ಭೂಮಿಯನ್ನು ಖರೀದಿ ಮಾಡಲು ಯಾವುದೇ ವ್ಯಕ್ತಿಯ ಮತ್ತು ಕುಟುಂಬದವರು 1974ರ ಹಿಂದೆ ಕೃಷಿಕರಾಗಿದ್ದು, ಆವ್ಯಕ್ತಿಯು ಅಥವಾ ಅವರ ಕುಟುಂಬದ ಸದಸ್ಯರು ಭೂಮಿಯನ್ನು ಖರೀದಿ ಮಾಡಿದ 5 ವರ್ಷಗಳ ಹಿಂದಿನ ಕೃಷಿಯೇತರ ವಾರ್ಷಿಕ ಆದಾಯ ಮಿತಿ 2 ಲಕ್ಷ ರೂ.ಗಳನ್ನು ಮೀರಿರಬಾರದೆಂದು 1995ರಿಂದ ಈವರೆಗೂ ಜಾರಿಯಲ್ಲಿ ತರುತ್ತಿರುವುದು ಅವೈಜ್ಞಾನಿಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಇತ್ತೀಚಿನ ದಿನಗಳಲ್ಲಿ ಭೂಮಿ ಬೆಲೆ ಸುಮಾರು 20 ರಿಂದ 30 ಪಟ್ಟು ಹೆಚ್ಚಳವಾಗುತ್ತಿದ್ದು, ಅಲ್ಲದೆ ಜೀವನ ಮಟ್ಟ ಏರುತ್ತಿರುವುದರಿಂದ ನಿಯಮ 79–ಎ ಪರಿಗಣಿಸಿದರೆ ಯಾರು ಕೃಷಿ ಭೂಮಿಯನ್ನು ಕ್ರಯಕ್ಕೆ ಪಡೆಯಲು ಸಾಧ್ಯವಿಲ್ಲದಿರುವುದು ನಿಜವೇ;

ಇ. ಈಗಾಗಲೇ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ನೂರಾರು ಪ್ರಕರಣಗಳು ದಾಖಲಾಗಿದ್ದು, ಇದರಿಂದ ಜನಸಾಮಾನ್ಯರಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;